ಅಲ್ಲ, ಕನ್ನಡ ಜನಜೀವನದ ವೈಶಿಷ್ಟ್ಯ ಸೂಚಕ ಶಬ್ದಗಳಾದ ರಾಗಿ ಹಿಟ್ಟು, ಮುದ್ದೆ, ಹುರಿಟ್ಟು, ಮಲ್ಲಿಗೆ ಜಡೆ, ಜ್ವಾಳದ ರೊಟ್ಟಿ ಮೊದಲಾದವನ್ನೆಲ್ಲ ಈ ಲೇಖನಗಳ ಮೂಲಕ ತಲುಪಿಸುತ್ತಾರೆ. ರಾಗಿಗೆ ಅಲ್ಲಿರುವ ಸಮಾನವಾಚಿ ಶಬ್ದ 'ಮಡುಆ'. ಆದರೆ ಬಿಹಾರದಲ್ಲಿ ಇದನ್ನು ಬೆಳೆದರೂ ಆ ಶಬ್ದ ಹಿಂದೀ ಜಗತ್ತಿಗೆ ಅಪರಿಚಿತವೇ ಆಗಿದೆ ಎಂಬುದರತ್ತ ಗಮನ ಸೆಳೆಯುತ್ತಾರೆ. ನಮ್ಮ ಯಕ್ಷಗಾನ, ಅದರ ವೈಶಿಷ್ಟ್ಯಗಳು ಇವೆಲ್ಲವನ್ನು ಪರಿಚಯಿಸುತ್ತಾರೆ. ಅವರ ಈ ಬಗೆಯ ಬರಹ ನೋಡಿದಾಗ ತಕ್ಷಣ ನೆನಪಾಗುವ ಇನ್ನೊಂದು ಹೆಸರು ಹಾಸನದ ರಾಜಾರಾಯರು ಮತ್ತು ಅವರ ಇಂಗ್ಲಿಷ್ ಕಾದಂಬರಿ 'ಕಾಂತಾಪುರ'. ಅದರಲ್ಲಿ ಭಾರತೀಯತೆಯ ಜೊತೆಜೊತೆಯಲ್ಲೇ ಕರ್ನಾಟಕದ ಹಳ್ಳಿಗಾಡಿನ ಜನಜೀವನದ ಚಿತ್ರಣ ಅದರೆಲ್ಲ ವಿವರಗಳೊಂದಿಗೆ ಸಿಗುವಂತೆಯೇ ಲಲಿತಾಂಬ ಅವರ ತುಲನಾತ್ಮಕ ಅಧ್ಯಯನ ಕುರಿತ ಲೇಖನಗಳಲ್ಲಿ 'ಕವಿರಾಜಮಾರ್ಗ', 'ಶಬ್ದಮಣಿದರ್ಪಣ'ದಿಂದ ಹಿಡಿದು ಕರ್ನಾಟಕದ ಪ್ರಮುಖ ಸಾಹಿತ್ಯ ಕೃತಿಗಳು, ಸಾಹಿತಿಗಳು ಮತ್ತು ಕನ್ನಡ ಭಾಷಾ ಪ್ರಯೋಗಗಳ ಕುರಿತಾದ ಸಾಕಷ್ಟು ವಿವರಪೂರ್ಣವಾದ ಪರಿಚಯ, ಅವುಗಳಲ್ಲಿನ ಉಲ್ಲೇಖಗಳು ಕನ್ನಡೇತರರಿಗೆ ಸಿಗುತ್ತವೆ. ದಕ್ಷಿಣ ಕನ್ನಡದ ದೈವಾರಾಧನೆ ಒಂದು ಜನಪದ ಆಚರಣೆ. ಅದಕ್ಕೆ ಜಾತಿಭೇದವಿಲ್ಲ. ದೈವಾರಾಧನೆಯಲ್ಲಿ ಒಬ್ಬ ಮುಸಲ್ಮಾನನ ಆತ್ಮ(ಅಲೀ), ಪ್ರೇತಾತ್ಮ ಕೂಡ ದೈವ ಆಗುತ್ತದೆ, ಆದರೆ ಇಸ್ಲಾಂನಲ್ಲಿ ಪ್ರೇತಾತ್ಮಕ್ಕೆ ಅಸ್ತಿತ್ವವಿಲ್ಲ ಎಂಬಂಥ ಸೂಕ್ಷ್ಮ ವಿಚಾರಗಳ ಉಲ್ಲೇಖ ಕೂಡ ಇವೆ.

'ಕನ್ನಡ ಸಾಹಿತ್ಯದಲ್ಲಿ ಅನುವಾದ ಪರಂಪರೆ ಮತ್ತು ವಿಕಾಸ'ದಲ್ಲಿ ವಿಕ್ರಮಾರ್ಜುನ ವಿಜಯ, ಪಂಪರಾಮಾಯಣ, ದುರ್ಗಸಿಂಹನ ಪಂಚತಂತ್ರ, ಮದನತಿಲಕ, ಯಶೋಧರ ಚರಿತೆ, ಕುಮಾರ ವಾಲ್ಮೀಕಿಯ ತೊರವೆ ರಾಮಯಣ, ಇವುಗಳಲ್ಲಿ ಬರುವ ಕವಿಗಳ ಮಾತುಗಳು, ಕಾವ್ಯಭಾಗಗಳು, ಇವುಗಳ ಮೂಲವನ್ನು ಹಿಂದಿಯಲ್ಲಿ ಲಿಪ್ಯಂತರಿಸಿ ಕೊಡುವುದರ ಜೊತೆಗೆ ಅವುಗಳ ಹಿಂದೀ ಅನುವಾದವನ್ನೂ ಕೊಡುತ್ತಾ ವ್ಯಾಖ್ಯಾನ-ವಿಮರ್ಶೆ ಮಾಡುತ್ತಾ ಹೋಗುತ್ತಾರೆ. ಅದೇ ರೀತಿ





'ಕನ್ನಡದಲ್ಲಿ ರಾಮಯಣ-ರಾಮ ಮತ್ತು ಕೃಷ್ಣ'ದಲ್ಲಿ ಕೂಡ ಪಂಪನಿಂದ ಕುವೆಂಪುವರೆಗಿನ ಹಳೆಯ ಹೊಸಕವಿಗಳ ಬಹುಮುಖ್ಯ ಕೃತಿಗಳ, ಕೃತಿಭಾಗಗಳ ಲಿಪ್ಯಂತರ, ಅನುವಾದ ಮತ್ತು ವ್ಯಾಖ್ಯಾನ ವಿಮರ್ಶೆ ಮಾಡುತ್ತ ಹೋಗುವ ಈ ಇಡೀ ಗ್ರಂಥವೇ ತೌಲನಿಕ ಸಾಹಿತ್ಯಕ್ಕೊಂದು ಅತ್ಯಮೂಲ್ಯ ಕಾಣಿಕೆ ಎನ್ನುವುದರಲ್ಲಿ ಎರಡು ಅಭಿಪ್ರಾಯವಿರಲು ಸಾಧ್ಯವಿಲ್ಲ. ಹಿಂದೀ ಜಗತ್ತಿಗೆ ಮತ್ತು ತನ್ಮೂಲಕ ಇತರೆ ಭಾರತೀಯ ಭಾಷಾ ಸಾಹಿತ್ಯಗಳಿಗೆ ಕನ್ನಡದ ಪರಿಚಯವಾಗಬೇಕಾದದ್ದು ಹೀಗೇ ತಾನೆ?

ಇಷ್ಟೇ ಪ್ರಾಮುಖ್ಯ ಹೊಂದಿರುವ, ಅವರು ಮಾಡುತ್ತಿರುವ ಮತ್ತೊಂದು ಮಹತ್ವದ ಕೆಲಸವೆಂದರೆ 2005ರಿಂದ ಇಂದಿನವರೆಗೆ ನಿರಂತರವಾಗಿ ಪ್ರತಿ ತಿಂಗಳೂ ಹಿಂದಿಯಲ್ಲಿ ಅಂಕಣ ಬರಹಗಳ ಮೂಲಕ ಕನ್ನಡದ ಹಳೆಯ ಮತ್ತು ಹೊಸಕಾಲದ ಕವಿ, ಲೇಖಕ ಸಾಹಿತಿಗಳ ಭಾಷಾ ವೈಶಿಷ್ಟ್ಯ ಹಾಗೂ ಭಾರತದ ಇನ್ನಿತರ ಸಾಹಿತ್ಯಗಳೊಂದಿಗೆ ಅದಕ್ಕಿರುವ ಸಾದೃಶ್ಯ ವೈದೃಶ್ಯಗಳನ್ನು ತಿಳಿಸುವ ಮೂಲಕ ಹಿಂದಿಯವರಿಗೊಂದು ವಿಶಿಷ್ಟವಾದ ಕನ್ನಡ ಸಾಹಿತ್ಯದ ಇತಿಹಾಸವನ್ನು ಕಟ್ಟಿಕೊಡುತ್ತಿದ್ದಾರೆ. ಇದರ ಜೊತೆಗೆ ಹೇಳಲೇಬೇಕಾದ್ದು ಇಂದೂರಿನ ದೇವಿ ಅಹಲ್ಯಾ ವಿ.ವಿ.ಯಲ್ಲಿ ಕನ್ನಡ-ಹಿಂದಿ ನಡುವಣ ತೌಲನಿಕ ಅಧ್ಯಯನ ಕುರಿತಾದ ವಿಶಿಷ್ಟ ಬೋಧನೆಯ ಜೊತೆಗೆ ಭಾರತದಾದ್ಯಂತ ಸಂಚರಿಸಿ ಈ ವಿಷಯದ ಕುರಿತಾಗಿ ಉಪನ್ಯಾಸ, ಸಂಶೋಧನಾತ್ಮಕ ಲೇಖನಗಳ ಮುಖೇನ ಅವುಗಳ ಪ್ರಸಾರ ಕಾರ್ಯದಲ್ಲಿ ಅವಿಶ್ರಾಂತ ದುಡಿಮೆ ಮಾಡಿದ್ದಾರೆ. ನಿಜವಾದ ಅರ್ಥದಲ್ಲಿ ಅವರು